# ಕರ್ನಾಟಕ ಲೋಕಾಯುಕ್ತ

ಸಂ. ಕಂಪ್ಲೇಂಟ್/ಉಪಲೋಕ್/ಬಿಡಿ/2869/2021
ಪಿ.ಓ.ಎ.ಆರ್.ಇ-06 (ಮಂಡನಾಧಿಕಾರಿಗಳ ಶಾಖೆ).

ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀದಿ,
ಬೆಂಗಳೂರು ದಿನಾಂಕ:25/04/2022.
26

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 12(3) ರ ಅನ್ವಯ ಶಿಫಾರಸ್ಸು ವರದಿ

**ವಿಷಯ: ಶ್ರೀ. ಎಸ್.ಎನ್. ಕರಿಬಸಪ್ಪ ಬಿನ್ ಸಣ್ಣನಾಗಪ್ಪ, ದ್ವಿತೀಯ ದರ್ಜೆ ಸಹಾಯಕರು, ಸಹಾಯಕ ಆಯುಕ್ತರ ಕಚೇರಿ (ಎಲ್.ವಿ.ಓ.-460), ವಾಣಿಜ್ಯ ತೆರಿಗೆ ಇಲಾಖೆ, ದಾವಣಗೆರೆರವರು ಕರ್ತವ್ಯಲೋಪ / ದುರ್ನಡತೆ ತೋರಿದ ಬಗ್ಗೆ.**

*****

1. ದಾವಣಗೆರೆ ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆಯ ಪೋಲಿಸ್ ನಿರೀಕ್ಷಕರು (ಇನ್ನು ಮುಂದೆ 'ತನಿಖಾಧಿಕಾರಿ' ಎಂದು ಕರೆಯಲ್ಪಡುತ್ತಾರೆ) ತನಿಖಾ ವರದಿ ಮತ್ತು ಸಂಭಂದಿಸಿದ ದಾಖಲೆಗಳೊಂದಿಗೆ ಸಲ್ಲಿಸಿದ ವರದಿಯಲ್ಲಿ **ಶ್ರೀ. ಎಸ್.ಎನ್. ಕರಿಬಸಪ್ಪ ಬಿನ್ ಸಣ್ಣನಾಗಪ್ಪ, ದ್ವಿತೀಯ ದರ್ಜೆ ಸಹಾಯಕರು, ಸಹಾಯಕ ಆಯುಕ್ತರ ಕಚೇರಿ (ಎಲ್.ವಿ.ಓ.-460), ವಾಣಿಜ್ಯ ತೆರಿಗೆ ಇಲಾಖೆ, ದಾವಣಗೆರೆ, ದಾವಣಗೆರೆ ಜಿಲ್ಲೆ,** (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ). **ಶ್ರೀ. ಪ್ರಕಾಶಗೌಡ ಪಾಟೀಲ, ಪೊಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆ** (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರಿಗೆ ಬಂದ ಮಾಹಿತಿಯ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ, ಸೋರ್ಸ್ ವರದಿಯನ್ನು ಪೊಲೀಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೂರ್ವ ವಲಯ, ದಾವಣಗೆರೆರವರಿಗೆ ಸಲ್ಲಿಸಿದ್ದು, ಅವರು ಅದನ್ನು ಪರಿಶೀಲಿಸಿ ಸೋರ್ಸ್ ವರದಿಯ ಆಧಾರದ ಮೇಲೆ ದಾವಣಗೆರೆ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಆರಕ್ಷಕ ಉಪಾಧೀಕ್ಷಕರಿಗೆ ಎದುರುದಾರರ ವಿರುದ್ಧ ಸ್ವಯಂ ದೂರು ದಾಖಲಿಸಲು ಆದೇಶ ಮಾಡಿರುತ್ತಾರೆ. ದೂರುದಾರರು ನೀಡಿದ ಗೌಪ್ಯ ಮಾಹಿತಿಯನ್ನು ಆಧರಿಸಿ, ಎದುರುದಾರರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದು, ಎದುರುದಾರರು ಅವರ ಬಲ್ಲ ಮೂಲಗಳ ಆದಾಯಕ್ಕಿಂತ ಶೇಕಡ 56.50 ರಷ್ಟು ಹೆಚ್ಚಿನ ಆಸ್ತಿಯನ್ನು ಹೊಂದಿರುತ್ತಾರೆಂದು ತನಿಖಾಧಿಕಾರಿಗಳು ವರದಿ ಸಲ್ಲಿಸಿದ ಮೇರೆಗೆ ದಾಖಲಾತಿಗಳನ್ನು ಪರಿಶೀಲಿಸಿದಾಗ ಎದುರುದಾರರು ಅವರ ಸೇವಾ ಅವಧಿಯಲ್ಲಿ ಅವರು ಖರೀದಿಸಿದ ಸ್ಥಿರಾಸ್ತಿಗಳ ಬಗ್ಗೆ, ವಾಹನ ಖರೀದಿಸಿದ ಬಗ್ಗೆ, ಸಾಲ ಪಡೆದ ಬಗ್ಗೆ ಮತ್ತು ಮಾರಾಟ ಮಾಡಿದ ಬಗ್ಗೆ ಕ.ನಾ.ಸೇ. (ನಡತೆ) ನಿಯಮಗಳನ್ನು ಪಾಲಿಸದೆ, ಕರ್ತವ್ಯಲೋಪ/

ದುರ್ನಡತೆ) ತೋರಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 7(2) ರಡಿಯಲ್ಲಿ ತನಿಖೆ ಕೈಗೊಂಡಿದೆ.

2. **ಪ್ರಕರಣದ ಸಂಕ್ಷಿಪ್ತ ಸಾರಾಂಶ:-**

i) ದೂರುದಾರರಾದ **ಶ್ರೀ. ಪ್ರಕಾಶಗೌಡ ಪಾಟೀಲ, ಪೊಲೀಸ್ ನಿರೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೋಲಿಸ್ ಠಾಣೆ** ಇವರಿಗೆ ಬಂದ ಮಾಹಿತಿ ಮೇರೆಗೆ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಿ, ಸೋರ್ಸ್ ವರದಿಯನ್ನು ಪೋಲಿಸ್ ಅಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೂರ್ವ ವಲಯ ದಾವಣಗೆರೆರವರಿಗೆ ಸಲ್ಲಿಸಿದ್ದು, ನಂತರ ಪೋಲೀಸ್ ಅಧೀಕ್ಷಕರು ಸೋರ್ಸ್ ವರದಿಯ ಆಧಾರದ ಮೇಲೆ ದಾವಣಗೆರೆ ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆಯ ಆರಕ್ಷಕ ಉಪಾಧೀಕ್ಷಕರಿಗೆ ಎದುರುದಾರರ ವಿರುದ್ಧ ಸ್ವಯಂ ದೂರು ದಾಖಲಿಸಲು ಆದೇಶಮಾಡಿರುತ್ತಾರೆ. ಅದರನ್ವಯ ದಾವಣಗೆರೆ ಭ್ರಷ್ಟಾಚಾರ ನಿಗ್ರಹದಳ ಪೋಲೀಸ್ ಠಾಣೆಯ ಗುನ್ನೆ ನಂ.04/2017ರಲ್ಲಿ ಕಲಂ 13(1)(ಇ) ಸಹಿತ 13(2) ಭ್ರಷ್ಟಾಚಾರ ನಿಗ್ರಹ ಕಾಯ್ದೆ 1988ರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿರುತ್ತಾರೆ.

iia) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಅವರ, ಅವರ ಪತ್ನಿಯ ಮತ್ತು ಕುಟುಂಬದವರ ಹೆಸರಿನಲ್ಲಿ ಈ ಕೆಳಕಂಡ ಸ್ಥಿರಾಸ್ತಿಗಳನ್ನು ಗಳಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:-

| | |
|---|---|
| 1. | ಎದುರುದಾರರ ಹೆಸರಿನಲ್ಲಿ ದಾವಣಗೆರೆ ನಿಟ್ಟುವಳ್ಳಿ ಗ್ರಾಮದ ಸರ್ವೆ ನಂ.54ರಲ್ಲಿ ಸೈಟ್ ನಂ.ಚಾಲ್ತಿ ಮುನ್ಸಿಪಲ್ ಡೋರ್ ನಂ.655/1, ಹಳೆ ಖಾತೆ ನಂ.3384, ಚಾಲ್ತಿ ಖಾತೆ ನಂ.452, 20X30 ಅಡಿ ಅಳತೆಯ ಸೈಟನ್ನು ದಿ:12/05/1992ರಲ್ಲಿ ಶ್ರೀಮತಿ. ಕತ್‌ಮುನ್ನೀಸ ಕೋಂ ಕಲಖಾನ್‌ರವರಿಂದ 11,000/- ರೂ. ಗಳಿಗೆ ಖರೀದಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |
| 2. | ದಾವಣಗೆರೆ ನಿಟ್ಟುವಳ್ಳಿ ಗ್ರಾಮದ ಸರ್ವೆ ನಂ.13/2ಬಿ2 ರಲ್ಲಿ ಸೈಟ್ ನಂ.12, ಮುನ್ಸಿಪಲ್ ಡೋರ್ ನಂ.522, ಖಾತೆ ನಂ.2682, 54+56/2X30 ಅಡಿ ಅಳತೆಯ ಸೈಟನ್ನು ದಿ: 08/10/2004 ರಂದು ಬೇನಾಮಿಯಾಗಿ** ಹನುಮಂತಪ್ಪರವರ (ಅವರ ಮಾವ) ಹೆಸರಿನಲ್ಲಿ ಶ್ರೀ.ಹೆಚ್. ಬಿ. ರಾಮಸ್ವಾಮಿ ಬಿನ್ ಹೆಚ್. ಎಸ್.ಭೀಮಯ್ಯರವರಿಂದ 66,000/- ರೂ. ಗಳಿಗೆ ಖರೀದಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ |

| | |
|---|---|
| | ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ.<br><br>(**ಷರಾ: ತನಿಖಾಧಿಕಾರಿಯವರು ದಾಳಿ ಮಾಡಿದ ಸಂದರ್ಭದಲ್ಲಿ ಎದುರುದಾರರು ಅವರ ಕುಟುಂಬ ಸಮೇತ ಮೇಲ್ಕಂಡ ಮನೆಯಲ್ಲಿ ವಾಸವಿರುವುದಲ್ಲದೇ ಅವರು ಪಡೆದಂತಹ ಅನಿಲ ಸಂಪರ್ಕಕ್ಕೆ ಮತ್ತು ಬ್ಯಾಂಕ್ ವ್ಯವಹಾರಗಳಿಗೆ ಹಾಗೂ ಇತರೆ ವ್ಯವಹಾರಗಳಿಗೆ ಎದುರುದಾರರು ಮೇಲ್ಕಂಡ ಮನೆಯ ವಿಳಾಸವನ್ನೇ ನೀಡಿರುತ್ತಾರೆ. ಅಲ್ಲದೆ ಮನೆಯ ಕಾಂಪೌಂಡ್ ಹೊರಭಾಗದಲ್ಲಿ ಹಾಕಿರುವ ನಾಮಫಲಕದಲ್ಲಿ ಎದುರುದಾರರ ಮಕ್ಕಳ ಹೆಸರುಗಳನ್ನು ಬರೆಸಿರುತ್ತಾರೆ ಮತ್ತು ನೆಲಮಹಡಿಯಲ್ಲಿ ಎದುರುದಾರರ ಮಗನ ಹೆಸರಿನ ನಾಮಫಲಕವನ್ನು ಹಾಕಿರುತ್ತಾರೆ ಹಾಗೂ ಎದುರುದಾರರ ಮಾವನಿಗೆ ಸಂಬಂಧಿಸಿದ ಯಾವುದೇ ಸ್ಥಿರ / ಚರ ಆಸ್ತಿಗಳ ಬಗ್ಗೆ ದಾಖಲೆಗಳು ಲಭ್ಯವಿರುವುದಿಲ್ಲ. ಆ ಕಾರಣ, ಎದುರುದಾರರು ಮೇಲ್ಕಂಡ ಸ್ವತ್ತನ್ನು ಬೇನಾಮಿಯಾಗಿ ಖರೀದಿಸಿರುವುದು ಕಂಡುಬಂದಿರುತ್ತದೆ.) |
| 3. | ದಾವಣಗೆರೆ ಅವರಗೆರೆ ಗ್ರಾಮದ ಸರ್ವೆ ನಂ.242/2ಬಿ ರಲ್ಲಿ ಸೈಟ್ ನಂ.44, ಮುನ್ಸಿಪಲ್ ಡೋರ್ ನಂ.361/44, ಅಳತೆ 1600 ಚದರ ಅಡಿ ಅಳತೆಯ ಖಾಲಿ ನಿವೇಶನವನ್ನು ಎದುರುದಾರರ ಪತ್ನಿ ಶ್ರೀಮತಿ. ರತ್ನಮ್ಮರವರ ಹೆಸರಿನಲ್ಲಿ ದಿ:03/12/2007ರಂದು ಅಕ್ಕನಾಗಮ್ಮನವರ ಜಿ.ಪಿ.ಎ. ಹೋಲ್ಡರ್ ಆದ ಶ್ರೀ. ಕೃಷ್ಣಮೂರ್ತಿ ಡಿ.ಟಿ. ರವರಿಂದ 96,000/- ರೂ. ಗಳಿಗೆ ಖರೀದಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |
| 4. | ಎದುರುದಾರರ ಹೆಸರಿನಲ್ಲಿ ದಾವಣಗೆರೆ ನಿಟ್ಟುವಳ್ಳಿ ಗ್ರಾಮದ ಸರ್ವೆ ನಂ.22/ಪಿ ರಲ್ಲಿ ಸೈಟ್ ನಂ.84, ಮುನ್ಸಿಪಲ್ ಡೋರ್ ನಂ.1818, ಚಾಲ್ತಿ ಡೋರ್ ನಂ. 1818/84, ಅಳತೆ 30X50 ಅಡಿ ಖಾಲಿ ನಿವೇಶನವನ್ನು ದಿ: 13/06/2007ರಂದು ಎದುರುದಾರರ ಹೆಸರಿಗೆ ಶ್ರೀಮತಿ. ಲಕ್ಷ್ಮೀದೇವಿ ಕೋಂ ಬಿ.ಗುರುದೇವ್ ರವರಿಂದ 68,000/- ರೂ. ಗಳಿಗೆ ಖರೀದಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |
| 5. | ಎದುರುದಾರರ ಹೆಸರಿನಲ್ಲಿ ದಾವಣಗೆರೆ ಅವರಗೆರೆ ಗ್ರಾಮದ ಸರ್ವೆ ನಂ.233/3ಬಿ7, ಸೈಟ್ ನಂ.02, ಮಹಾನಗರ ಪಾಲಿಕೆ ಡೋರ್ ನಂ.694/2, ಅಳತೆ 31X62+69/2=2030.5 ಚದರ ಅಡಿ ಅಳತೆಯ ಖಾಲಿ ನಿವೇಶನವನ್ನು ದಿ: 18/07/2003ರಂದು ಶ್ರೀ. ಬಿ.ಬಿ. ಕುಮಾರ್ ಬಿನ್ ಬಸವರಾಜಪ್ಪರವರಿಂದ 2,85,000/- ರೂ. ಗಳಿಗೆ ಖರೀದಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |

| | |
|---|---|
| 6 | ಎದುರುದಾರರ ಹೆಸರಿನಲ್ಲಿ ದಾವಣಗೆರೆ ಅವರಗೆರೆ ಗ್ರಾಮದ ಸರ್ವೆ ನಂ.233/3ಬಿ7, ಸೈಟ್ ನಂ.03, ಮಹಾನಗರ ಪಾಲಿಕೆ ಡೋರ್ ನಂ.694/3, ಅಳತೆ 26X69+75/2=2088 ಚದರ ಅಡಿ ಅಳತೆಯ ಖಾಲಿ ನಿವೇಶನವನ್ನು ದಿ: 18/07/2003ರಂದು ಶ್ರೀ. ಬಿ.ಬಿ. ಕುಮಾರ್ ಬಿನ್ ಬಸವರಾಜಪ್ಪರವರಿಂದ 2,93,000/- ರೂ. ಗಳಿಗೆ ಖರೀದಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |
| 7 | ಎದುರುದಾರರ ಪತ್ನಿ ಹೆಸರಿನಲ್ಲಿ ದಾವಣಗೆರೆ ಅವರಗೆರೆ ಗ್ರಾಮದ ಸರ್ವೆ ನಂ.234/6 ರಲ್ಲಿ ಸೈಟ್ ನಂ.04, ಚಾಲ್ತಿ ಡೋರ್ ನಂ.698/4, ಅಳತೆ 1949 ಚದರ ಅಡಿ ಅಳತೆಯ ಖಾಲಿ ನಿವೇಶನವನ್ನು ದಿ: 28/06/2014ರಂದು ಶ್ರೀ. ಸೂರಜ್ ಆವಾಜಿ ಮತ್ತು ಶ್ರೀ. ಕಿರಣ್ ಎ.ಎಂ. ರವರಿಂದ 2,73,000/- ರೂ. ಗಳಿಗೆ ಖರೀದಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |
| 8 | ಎದುರುದಾರರ ಪತ್ನಿ ಶ್ರೀಮತಿ. ರತ್ನಮ್ಮನವರ ಹೆಸರಿನಲ್ಲಿ ಚನ್ನಗಿರಿ ತಾಲೂಕು, ಸಂತೆಬೆನ್ನೂರು ಹೋಬಳಿ, ರಾಮಗೊಂಡನಹಳ್ಳಿ ಗ್ರಾಮದ ಸರ್ವೆ ನಂ.60 ರಲ್ಲಿ 2 ಎಕರೆ 30 ಗುಂಟೆ ಖುಷ್ಕಿ ಜಮೀನನ್ನು ದಿ:02/07/2015ರಂದು ಶ್ರೀ. ಜಿ.ಆರ್.ಗುರುರಾಜ್ ಮತ್ತು ಶ್ರೀಮತಿ. ಬೈರಮ್ಮರವರಿಂದ 2,51,000/- ರೂ.ಗಳಿಗೆ ಖರೀದಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |
| 9 | ಎದುರುದಾರರ ಪತ್ನಿ ಶ್ರೀಮತಿ. ರತ್ನಮ್ಮನವರ ಹೆಸರಿನಲ್ಲಿ ದಾವಣಗೆರೆ ಅವರಗೆರೆ ಗ್ರಾಮದ ಸರ್ವೆ ನಂ.232/2 ರಲ್ಲಿ ಸೈಟ್ ನಂ.49, ದಾವಣಗೆರೆ ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂ.403/49, ಅಳತೆ 30X40 ಚದರ ಅಡಿ ನಿವೇಶನವನ್ನು ದಿ:21/03/2016ರಂದು ಶ್ರೀಮತಿ. ಶುಭಾವೀರ ಪ್ರಕಾಶ್, ಬೂದಾಳಮಠ ಕೋಂ ವೀರಪ್ರಕಾಶ್ ಆರ್. ಬೂದಾಳಮಠರವರಿಂದ 2,04,000/- ರೂ. ಗಳಿಗೆ ಖರೀದಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |
| 10 | ಎದುರುದಾರರ ಹೆಸರಿನಲ್ಲಿ ಚನ್ನಗಿರಿ ತಾಲೂಕು, ಸಂತೆಬೆನ್ನೂರು ಹೋಬಳಿ, ರಾಮಗೊಂಡನಹಳ್ಳಿ ಗ್ರಾಮದ ಸರ್ವೆ ನಂ.60 ರಲ್ಲಿ 2 ಎಕರೆ ಜಮೀನನ್ನು ದಿ:10/01/2017ರಂದು ಶ್ರೀ. ಜಿ.ಆರ್.ಗುರುರಾಜ್ ಮತ್ತು ಶ್ರೀಮತಿ. ಬೈರಮ್ಮರವರಿಂದ 2,60,000/- ರೂ.ಗಳಿಗೆ ಖರೀದಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |

| | |
|---|---|
| 11 | ಎದುರುದಾರರ ಪತ್ನಿ ಶ್ರೀಮತಿ. ರತ್ನಮ್ಮನವರ ಹೆಸರಿನಲ್ಲಿ ದಾವಣಗೆರೆಯ (ಎ) ಅವರಗೆರೆ ಗ್ರಾಮದ ಸರ್ವೆ ನಂ.220/14, ಸರ್ವೆ ನಂ.220/15ರಲ್ಲಿ ಸೈಟ್ ನಂ.05, ದಾವಣಗೆರೆ ಮಹಾನಗರ ಪಾಲಿಕೆ ಚಾಲ್ತಿ ಡೋರ್ ನಂ.401/ಪಿ-5, ಅಳತೆ 50X10 ನಿವೇಶನವನ್ನು ಮತ್ತು (ಬಿ) ಅವರಗೆರೆ ಗ್ರಾಮದ ಸರ್ವೆ ನಂ.220/18, ಸರ್ವೆ ನಂ.220/20ರಲ್ಲಿ ಸೈಟ್ ನಂ.14, ಡೋರ್ ನಂ.402/ಪಿ-14 ರಲ್ಲಿ ಅಳತೆ 50X10 ಚದರ ಅಡಿ, ಒಟ್ಟು ಎ+ಬಿ=50X20 ಚದರ ಅಡಿಯ ನಿವೇಶನವನ್ನು ದಿ: 21/10/2016ರಂದು ಶ್ರೀ. ಎನ್. ಮಂಜುನಾಥಕಲಾಲ್ ಬಿನ್ ನಾಗಪ್ಪ ಕಲಾಲ್ ರವರಿಂದ 1,85,000/- ರೂ.ಗಳಿಗೆ ಖರೀದಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |
| 12 | ಎದುರುದಾರರ ಹೆಸರಿನಲ್ಲಿ ದಾವಣಗೆರೆ ನಿಟ್ಟುವಳ್ಳಿ ಗ್ರಾಮದ ಸರ್ವೆ ನಂ.13/2ಬಿ2 ರಲ್ಲಿ ಸೈಟ್ ನಂ.12, ಮುನ್ಸಿಪಲ್ ಡೋರ್ ನಂ.522, ಖಾತೆ ನಂ.2682, 54+56/2X30 ಅಡಿ ಅಳತೆಯ ನಿವೇಶನದಲ್ಲಿ 2006ನೇ ಸಾಲಿನಲ್ಲಿ ಮೂರು ಅಂತಸ್ಥಿನ 30X50 ಚದರ ಅಡಿ ಅಳತೆಯ ಭವ್ಯವಾದ ಬಂಗಲೆಯನ್ನು 45,00,000/- ರೂ.ಗಳಲ್ಲಿ ನಿರ್ಮಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |
| 13 | ಎದುರುದಾರರ ಹೆಸರಿನಲ್ಲಿ ದಾವಣಗೆರೆ ನಿಟ್ಟುವಳ್ಳಿ ಗ್ರಾಮದ ಸರ್ವೆ ನಂ.54ರಲ್ಲಿ 20X30 ಅಡಿ ಅಳತೆಯುಳ್ಳ ಎರಡು ಮಹಡಿಗಳ ಮನೆಯ ಡೋರ್ ನಂ.655/1ನ್ನು 15,00,000/- ರೂ.ಗಳ ವೆಚ್ಚದಲ್ಲಿ ನಿರ್ಮಿಸಿರುತ್ತಾರೆ. ಆ ಬಗ್ಗೆ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |
| 14 | ಎದುರುದಾರರ ಪತ್ನಿಯ ಹೆಸರಿನಲ್ಲಿ ದಾವಣಗೆರೆ ಮೌನೇಶ್ವರ ಬಡಾವಣೆಯ ಎ.ಕೆ. ಕಾಲೋನಿಯಲ್ಲಿರುವ @54/1ಪಿ ರಲ್ಲಿ 25 X30 ಅಡಿ ಅಳತೆಯ ನಿವೇಶನವನ್ನು ದಿ: 02/05/1995 ರಂದು ಶ್ರೀಮತಿ. ರೈಲ್ವೆ ಲಕ್ಷ್ಮಮ್ಮ ಕೋಂ ಟಿ. ರಾಮಣ್ಣ, ಬಸವರಾಜಪೇಟೆ, ದಾವಣಗೆರೆರವರಿಂದ 12,000/- ರೂ.ಗಳಿಗೆ ಖರೀದಿ ಮಾಡಿದ್ದು, ಸದರಿ ನಿವೇಶನದಲ್ಲಿ 4,90,000/- ರೂ. ಮೊತ್ತದ ನಾಲ್ಕು ಮನೆಗಳನ್ನು ನಿರ್ಮಿಸಿರುತ್ತಾರೆ. ಖರೀದಿ ಮತ್ತು ಮನೆಗಳನ್ನು ನಿರ್ಮಾಣ ಮಾಡುವ ಪೂರ್ವದಲ್ಲಿ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |
| 15 | ಎದುರುದಾರರ ಹೆಸರಿನಲ್ಲಿ ದಾವಣಗೆರೆ ನಗರದ ಸರಸ್ವತಿ ಬಡಾವಣೆ ದುರ್ಗಾಂಬಿಕಾ ದೇವಸ್ಥಾನದ ಹತ್ತಿರ ನಿಟ್ಟುವಳ್ಳಿ ಗ್ರಾಮದ ಸರ್ವೆ ನಂ.11ರಲ್ಲಿರುವ ಖಾತೆ ನಂ.4721, 145 ಚ.ಅ. ನಿವೇಶನವನ್ನು 19,000/- ರೂ.ಗಳಿಗೆ ಖರೀದಿಸಿ, ಸದರಿ ನಿವೇಶನದಲ್ಲಿ 10X10 ಚ. ಅಡಿ |

| | |
|---|---|
| | ಅಳತೆಯುಳ್ಳ ಮಳಿಗೆಯನ್ನು 90,000/– ರೂ. ವೆಚ್ಚದಲ್ಲಿ ನಿರ್ಮಿಸಿರುತ್ತಾರೆ. ನಿವೇಶನ ಖರೀದಿಸುವ ಮತ್ತು ಮಳಿಗೆ ನಿರ್ಮಾಣ ಮಾಡುವ ಪೂರ್ವದಲ್ಲಿ ಎದುರುದಾರರು ಅವರ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೇ. / ವರದಿ ಮಾಡದೇ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ. |

ii(b) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಈ ಕೆಳಕಂಡ ವಾಹನಗಳನ್ನು ಖರೀದಿಸಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:–

| ಕ್ರ. ಸಂ. | ವಾಹನದ ವಿವರ | ಯಾರ ಹೆಸರಿನಲ್ಲಿ ಖರೀದಿಸಲಾಗಿದೆ. | ಅಂದಾಜು ಮೌಲ್ಯ ರೂ.ಗಳಲ್ಲಿ |
|---|---|---|---|
| 1 | ಹ್ಯುಂಡೈ ಕಾರು ಐ–20 ಕೆ.ಎ.–17–ಬಿ–9270ನ್ನು ದಿ: 05/09/2013 ರಂದು ಖರೀದಿಸಿರುತ್ತಾರೆ. | ಎದುರುದಾರರ ಮಗಳಾದ ಕು: ಸಿಂಧೂರವರ ಹೆಸರಿನಲ್ಲಿ. | 9,72,000/- +ತೆರಿಗೆ ಮತ್ತು ವಿಮೆ |
| 2 | ಸುಝಕಿ ಆಕ್ಸಿಸ್ ಕೆಎ–17–ಇಹೆಚ್–3576. | ಎದುರುದಾರರ ಹೆಸರಿನಲ್ಲಿ. | 48,913/– +ತೆರಿಗೆ ಮತ್ತು ವಿಮೆ |
| 3 | ಬಜಾಜ್ ಪಲ್ಸರ್ ವಾಹನ ಕೆಎ–17–ಇಯು–6726ನ್ನು ದಿ: 15/04/2016 ರಂದು ಖರೀದಿಸಿರುತ್ತಾರೆ. | ಎದುರುದಾರರ ಮಗನಾದ ಶ್ರೀ. ಅರವಿಂದ್‌ರವರ ಹೆಸರಿನಲ್ಲಿ. | 88,800/– +ತೆರಿಗೆ ಮತ್ತು ವಿಮೆ |
| 4 | ಆಕ್ಟೀವ 3ಜಿ ಬೈಕ್‌ನ ನೋಂದಣಿ ಸಂ. ಕೆ.ಎ.17 – ಇಎಸ್. – 2492, ದಿ: 12/10/2015ರಂದು ಖರೀದಿಸಿರುತ್ತಾರೆ. (ಆ ದಿನಾಂಕಕ್ಕೂ ಪೂರ್ವದಲ್ಲಿ ಎದುರುದಾರರು ಯಾವುದೇ ಸಂಬಳ ಪಡೆಯುವ ಕರ್ತವ್ಯ ನಿರ್ವಹಿಸುತ್ತಿರಲಿಲ್ಲ.) | ಎದುರುದಾರರ ಮಗಳಾದ ಕು: ಸಿಂಧೂರವರ ಹೆಸರಿನಲ್ಲಿ. | 51,837/– |

ಈ ಮೇಲ್ಕಂಡ ವಾಹನಗಳನ್ನು ಎದುರುದಾರರು ಅವರ ಮತ್ತು ಅವರ ಕುಟುಂಬದವರ ಹೆಸರಿನಲ್ಲಿ ಖರೀದಿಸಿದ್ದು, ಖರೀದಿಸುವ ಪೂರ್ವದಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೆ /

ವರದಿ ಮಾಡದೆ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(3)ರ ಉಲ್ಲಂಘನೆ ಮಾಡಿರುತ್ತಾರೆ.

ii(c) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಅವರ ಪತ್ನಿ ಹೆಸರಿನಲ್ಲಿ ಈ ಕೆಳಕಂಡ ಬ್ಯಾಂಕ್ ಸಾಲವನ್ನು ಪಡೆದಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:-

| ಕ್ರ. ಸಂ. | ಬ್ಯಾಂಕುಗಳ ವಿವರ | ಯಾರ ಹೆಸರಿನಲ್ಲಿ ಸಾಲ ಪಡೆಯಲಾಗಿದೆ. | ಸಾಲದ ಮೊತ್ತ ರೂ.ಗಳಲ್ಲಿ |
|---|---|---|---|
| 1 | ದಾವಣಗೆರೆ ನಿಟ್ಟುವಳ್ಳಿ ಶಾಖೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ, ದಾವಣಗೆರೆ ಶಾಖೆಯಿಂದ ದಿ: 12/01/2017ರಂದು ಸಾಲ ಪಡೆದಿರುತ್ತಾರೆ. | ಎದುರುದಾರರ ಪತ್ನಿ ಹೆಸರಿನಲ್ಲಿ | 2,60,000/- |

ಈ ಮೇಲ್ಕಂಡ ಸಾಲವನ್ನು ಎದುರುದಾರರು ಬ್ಯಾಂಕಿನಿಂದ ಪಡೆಯುವ ಪೂರ್ವದಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೆ / ವರದಿ ಮಾಡದೆ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 21(4)(1)ರ ಉಲ್ಲಂಘನೆ ಮಾಡಿರುತ್ತಾರೆ.

ii(d) ತನಿಖಾಧಿಕಾರಿಗಳು ಪ್ರಕರಣದ ತನಿಖೆಯ ಸಮಯದಲ್ಲಿ ಎದುರುದಾರರು ಮತ್ತು ಅವರ ಕುಟುಂಬದವರು ಈ ಕೆಳಕಂಡ ಸ್ಥಿರಾಸ್ತಿಗಳನ್ನು ಮಾರಾಟ ಮಾಡಿರುತ್ತಾರೆಂದು ವರದಿಯಲ್ಲಿ ತಿಳಿಸಿರುತ್ತಾರೆ:-

| ಕ್ರ. ಸಂ. | ಆಸ್ತಿಗಳ ವಿವರ | ಯಾರ ಹೆಸರಿನಲ್ಲಿ ಮಾರಾಟ ಮಾಡಲಾಗಿದೆ. | ಆದಾಯದ ಮೊತ್ತ ರೂ.ಗಳಲ್ಲಿ |
|---|---|---|---|
| 1 | ದಾವಣಗೆರೆ ನಿಟ್ಟುವಳ್ಳಿ ಗ್ರಾಮದ ಸ.ನಂ.54ರ ಮುನ್ಸಿಪಲ್ ಡೋರ್ ನಂ.655/1ರ ಚಾಲ್ತಿ ಖಾತೆ 452ರ ನಿವೇಶನದಲ್ಲಿ ಎರಡು ಮಹಡಿಗಳ ಮನೆ ಮಾರಾಟದಿಂದ ಬಂದ ಆದಾಯ. | ಎದುರುದಾರರು ಮನೆಯನ್ನು ದಾವಣಗೆರೆಯ ಮುರಳಿಮೋಹನ್ ಬಿನ್ ಎ.ಸಿ.ನಾಯರ್‌ರವರಿಗೆ ಮಾರಾಟ ಮಾಡಲಾಗಿದೆ. | 4,50,000/- |

| | | | |
|---|---|---|---|
| 2 | ದಾವಣಗೆರೆ ನಿಟ್ಟುವಳ್ಳಿಗ್ರಾಮದ ಸರ್ವೆ ನಂ.22-ಪಿರಲ್ಲಿ ಸೈಟ್ ನಂ.84ರಲ್ಲಿ ಡೋರ್ ನಂ.1818/34 ಅಳತೆ 30X50 ರಲ್ಲಿರುವ ಮನೆ. | ಎದುರುದಾರರು ದಾವಣಗೆರೆಯ ಮಂಜುನಾಥ ಮತ್ತು ಹನುಮಂತಪ್ಪ ಎಂಬುವವರಿಗೆ ಮಾರಾಟಮಾಡಲಾಗಿದೆ. | 2,55,000/- |
| 3 | ದಾವಣಗೆರೆ ಜಯನಗರದ 361/44ರ 1600 ಚದರ ಅಡಿ ನಿವೇಶನ. | ಎದುರುದಾರರ ಪತ್ನಿ ದಾವಣಗೆರೆಯ ಶ್ರೀಮತಿ ಅಭೀದಾಬೇಗಂ ಕೋಂ ಡಿ.ಪಿ.ದೂದಪೀರ್ ಸಾಬ್ ರವರಿಗೆ ಮಾರಾಟಮಾಡಲಾಗಿದೆ. | 4,00,000.- |

ಎದುರುದಾರರು ಮೇಲ್ಕಂಡ ಆಸ್ತಿಗಳನ್ನು ಮಾರಾಟ ಮಾಡುವ ಪೂರ್ವದಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಯಾವುದೇ ಪೂರ್ವಾನುಮತಿ ಪಡೆಯದೆ / ವರದಿ ಮಾಡದೆ ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 23(2) ರ ಉಲ್ಲಂಘನೆ ಮಾಡಿರುತ್ತಾರೆ.

iii) ಎದುರುದಾರರು ಅವರ ಸೇವಾ ಅವಧಿಯಲ್ಲಿ ಆಸ್ತಿ ಮತ್ತು ದಾಯಿತ್ವದ ಪಟ್ಟಿಗಳಲ್ಲಿ ನೈಜ ಮಾಹಿತಿಯನ್ನು ಒದಗಿಸಿರುವುದಿಲ್ಲ.

iv) ಎದುರುದಾರರು ಅವರ ಸೇವಾ ಅವಧಿಯಲ್ಲಿ ಅವರ ಮತ್ತು ಅವರ ಪತ್ನಿಯ ಹೆಸರಿನಲ್ಲಿ ದಾವಣಗೆರೆ ನಗರದಲ್ಲಿ ಪ್ಯಾರಾ 2 ii(a) ಐಟಂ ನಂ.1 ರಿಂದ 15 ರಲ್ಲಿನ ಆಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ ಖರೀದಿಸುವ ಬಗ್ಗೆ ಮತ್ತು ಪ್ಯಾರಾ 2 ii(a)ರ ಐಟಂ ನಂ.13, 14 ಮತ್ತು 15ರಲ್ಲಿ 65 ಲಕ್ಷ ರೂ. ವೆಚ್ಚದಲ್ಲಿ ಮನೆಗಳನ್ನು ಕಟ್ಟಿಸುವ ಪೂರ್ವದಲ್ಲಿ ಹಾಗೂ ಪ್ಯಾರಾ 2 ii(b)ರಲ್ಲಿ ನಮೂದಿಸಿದ ವಾಹನಗಳನ್ನು ಖರೀದಿಸುವ ಪೂರ್ವದಲ್ಲಿ ಮತ್ತು ಪ್ಯಾರಾ 2 ii(c)ರಲ್ಲಿ ನಮೂದಿಸಿದ ಸಾಲವನ್ನು ಪಡೆಯುವ ಪೂರ್ವದಲ್ಲಿ ಹಾಗೂ ಪ್ಯಾರಾ 2 ii(d)ರಲ್ಲಿ ನಮೂದಿಸಿದ ಆಸ್ತಿಗಳನ್ನು ಮಾರಾಟಮಾಡುವ ಪೂರ್ವದಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ / ವರದಿ ಮಾಡದೆ ಸ್ಥಿರಾಸ್ತಿ / ಚರಾಸ್ತಿಗಳನ್ನು ಖರೀದಿಸಿದ್ದು, ಕಟ್ಟಡ ಕಟ್ಟಿದ್ದು, ವಾಹನಗಳನ್ನು ಖರೀದಿಸಿದ್ದು, ಸಾಲ ಪಡೆದಿದ್ದು ಮತ್ತು ಆಸ್ತಿಗಳನ್ನು ಮಾರಾಟ ಮಾಡಿದ್ದು ಎದುರುದಾರರು ಕೆ.ಸಿ.ಎಸ್.ಆರ್. (ನಡತೆ) ನಿಯಮಗಳು 1966ರ ನಿಯಮ 21(4)(1), 23(2), 23(3) ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 (ಪ್ರಸ್ತುತ ನಿಯಮ 22(4), 24(3) ಮತ್ತು 24(4) ರನ್ವಯ ಕ.ನಾ.ಸೇ. (ನಡತೆ) 2021) ನಿಯಮಗಳನ್ನು ಪಾಲಿಸದೆ ಕರ್ತವ್ಯಲೋಪವೆಸಗಿರುವುದು ಕಂಡುಬಂದಿರುತ್ತದೆ.

v) ತನಿಖಾಧಿಕಾರಿಗಳು ಎದುರುದಾರರು ಹೊಂದಿದ ಆಸ್ತಿ ಮತ್ತು ದಾಯಿತ್ವದ ಬಗ್ಗೆ ಪೂರ್ಣ ವಿವರಣೆ ಕೋರಿ ಅನುಬಂಧಗಳಲ್ಲಿ ಮಾಹಿತಿಯನ್ನು ಕೋರಿದ್ದು, ಎದುರುದಾರರು ಮಾಹಿತಿ ಹಾಗೂ ವಿವರಣೆಯನ್ನು ಕೆಲವು ಅನುಬಂಧಗಳನ್ನು ಸಲ್ಲಿಸಿರುತ್ತಾರೆ. ಆ ಅನುಬಂಧಗಳಲ್ಲಿ ನೀಡಿರುವ ವಿವರಣೆಯು ತೃಪ್ತಿದಾಯಕವಾದ ಉತ್ತರ ಅಥವಾ ವಿವರಣೆ ಅಥವಾ ಲೆಕ್ಕ ಆಗಿರುವುದಿಲ್ಲ.

vi) ತನಿಖಾಧಿಕಾರಿಯವರು ಸಂಗ್ರಹಿಸಿದ ದಾಖಲೆಗಳಿಂದ ಎದುರುದಾರರು ಕಾನೂನು ಸಮ್ಮತ ಆದಾಯಕ್ಕಿಂತ ಶೇಕಡ 48.66 ರಷ್ಟು ಅಸಮತೋಲನವಾಗಿ ಆಸ್ತಿಗಳನ್ನು ಎದುರುದಾರರ ಹಾಗೂ ಅವರ ಕುಟುಂಬದವರ ಹೆಸರಿನಲ್ಲಿ ಹೊಂದಿರುವುದು ಕಂಡುಬರುತ್ತದೆ ಹಾಗೂ ಎದುರುದಾರರು ಸ್ಥಿರ / ಚರ ಅಸ್ತಿಗಳನ್ನು ನಿಯಮಿಸಲಾದ ಪ್ರಾಧಿಕಾರದಿಂದ ಪೂರ್ವಾನುಮತಿ ಪಡೆಯದೆ ಖರೀದಿಸಿರುತ್ತಾರೆ. ಇದರಿಂದ ಎದುರುದಾರರು ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಗಳು 1966 ನಿಯಮಗಳನ್ನು ಪಾಲಿಸದೆ ಇರುವುದು ಮೇಲ್ನೋಟಕ್ಕೆ ಎದುರುದಾರರ ದುರ್ನಡತೆಯನ್ನು ತೋರಿಸುತ್ತದೆ ಎಂದು ತನಿಖಾಧಿಕಾರಿಯವರು ಎದುರುದಾರರ ವಿರುದ್ಧ ದೋಷಾರೋಪಣಾ ಪತ್ರವನ್ನು ಸಲ್ಲಿಸಿರುತ್ತಾರೆ.

3. ಎದುರುದಾರರಿಂದ ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ ಕೇಳಲಾಗಿತ್ತು. ಎದುರುದಾರರಿಗೆ ಈ ಕಚೇರಿಯಿಂದ ನೀಡಿದ ಪರಿವೀಕ್ಷಣಾ ಟಿಪ್ಪಣಿಯು ದಿ: 19/11/2021ರಂದು ಜಾರಿಯಾಗಿರುತ್ತದೆ. ಎದುರುದಾರರು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿಯನ್ನು ದಿ: 01/01/2022ರಂದು ಸಲ್ಲಿಸಿರುತ್ತಾರೆ. ಅವರ ಸಮಜಾಯಿಷಿಯಲ್ಲಿ ಪರಿವೀಕ್ಷಣಾ ಟಿಪ್ಪಣಿಯಲ್ಲಿ ನಮೂದಿಸಿದ ಸ್ಥಿರಾಸ್ತಿ ಮತ್ತು ಚರಾಸ್ತಿಗಳ ಮೊತ್ತವನ್ನು ಅವುಗಳ ಮೊತ್ತಕ್ಕೆ ಅನುಗುಣವಾಗಿ ನಮೂದಿಸಿಲ್ಲವೆಂದು ಹಾಗೂ ಎದುರುದಾರರು ಅವರ ಆಸ್ತಿ ಮತ್ತು ದಾಯಿತ್ವ ಹಾಗೂ ಖರ್ಚುಗಳಿಗೆ ಸಂಬಂಧಿಸಿದಂತೆ ಅನುಬಂಧಗಳನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ತನಿಖಾಧಿಕಾರಿಯು ಆಸ್ತಿ ಮತ್ತು ಖರ್ಚನ್ನು ಸಮರ್ಪಕವಾಗಿ ನಮೂದಿಸಿಲ್ಲವೆಂದು ತಿಳಿಸಿರುತ್ತಾರೆ. ಆದರೆ ಎದುರುದಾರರು ಅವರು ಸಲ್ಲಿಸಿದ ಆಕ್ಷೇಪಣೆಯಲ್ಲಿ ನಿಯಮಿಸಲಾದ ಪ್ರಾಧಿಕಾರದಿಂದ ಅವರು ಸ್ಥಿರ / ಚರಾಸ್ತಿಗಳನ್ನು ಖರೀದಿಸುವ ಪೂರ್ವದಲ್ಲಿ, ಮಾರಾಟ ಮಾಡುವ ಪೂರ್ವದಲ್ಲಿ, ಸಾಲ ಪಡೆಯುವ ಪೂರ್ವದಲ್ಲಿ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮ 1966ರ ಅಡಿಯಲ್ಲಿ ನಿಯಮ 21(4)(1), 23(2), 23(3)ರನ್ವಯ ಅನುಮತಿ / ಪೂರ್ವಾನುಮತಿ ಪಡೆದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಈ ಬಗ್ಗೆ ತನಿಖಾಧಿಕಾರಿಗಳು

ನಿಯಮಿಸಲಾದ ಪ್ರಾಧಿಕಾರಕ್ಕೆ ಎದುರುದಾರರು ಅವರ ಅಧಿಕಾರದ ಪರಿಶೀಲನಾ ಅವಧಿಯಲ್ಲಿ ಗಳಿಸಿದ ಸ್ಥಿರ / ಚರಾಸ್ತಿಗಳನ್ನು ಗಳಿಸುವ ಪೂರ್ವದಲ್ಲಿ ಪೂರ್ವಾನುಮತಿ ಪಡೆದ / ನೀಡಿದ ದಾಖಲೆಯನ್ನು ಹಾಜರುಪಡಿಸುವಂತೆ ತಿಳಿಸಿದಾಗ ಅವರು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಇದರಿಂದ ಎದುರುದಾರರು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮ 1966ರ ನಿಯಮಗಳನ್ನು ಉಲ್ಲಂಘಿಸಿರುವುದು ಕಂಡುಬರುತ್ತದೆ. ಆ ಕಾರಣ, ಎದುರುದಾರರು ನೀಡಿರುವ ಸಮಜಾಯಿಷಿಯು ಸಮರ್ಪಕವಾಗಿರುವುದಿಲ್ಲ ಮತ್ತು ಸಮಜಾಯಿಷಿ ಅಂಶಗಳ ಮೇರೆಗೆ ಪ್ರಕರಣವನ್ನು ಮುಕ್ತಾಯಗೊಳಿಸಲು ಸೂಕ್ತ ಕಾರಣಗಳಾಗಿ ಕಂಡುಬರುವುದಿಲ್ಲ.

ಈ ಮೇಲ್ಕಂಡ ಅಂಶಗಳಿಂದ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಎದುರುದಾರರು ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು 1966ರ ನಿಯಮ 21(4), 23(2) ಮತ್ತು 23(3) (ಪ್ರಸ್ತುತ ನಿಯಮ 22(4), 24(2), 24(3) ಮತ್ತು 24(4)ರ ಅನ್ವಯ ಕ.ನಾ.ಸೇ.(ನಡತೆ) 2021) ನಿಯಮಗಳನ್ನು ಪಾಲಿಸದೆ, ದುರ್ನಡತೆ ಮತ್ತು ಕರ್ತವ್ಯಲೋಪವೆಸಗಿರುವುದು ಕಂಡುಬಂದಿರುತ್ತದೆ.

4. ದೂರು ಅರ್ಜಿ, ಸಾಕ್ಷಿದಾರರ ಹೇಳಿಕೆಗಳು, ತನಿಖಾಧಿಕಾರಿ ಸಂಗ್ರಹಿಸಿದ ದಾಖಲೆಗಳು ಮತ್ತು ದೋಷಾರೋಪಣ ಪತ್ರದಲ್ಲಿರುವ ಮಾಹಿತಿಗಳಿಂದ ಎದುರುದಾರರು ನೀಡಿರುವ ಉತ್ತರಗಳನ್ನು ಕೂಲಂಕಷವಾಗಿ ಪರಿಶೀಲಿಸಲಾಗಿ, ಎದುರುದಾರರ ವಿರುದ್ಧ ನಡೆವಳಿಯನ್ನು ಕೈಬಿಡಲು ಸೂಕ್ತ / ಸಮಂಜಸ / ಸಮಾಧಾನಕರ ಕಾರಣ ತೋರಿಸಿಲ್ಲವೆಂದು ಅಭಿಪ್ರಾಯಕ್ಕೆ ಬರಲಾಗಿದೆ.

5. ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 2 (12) ರ ಪ್ರಕಾರ ಎದುರುದಾರರು ಸರ್ಕಾರಿ / ಸಾರ್ವಜನಿಕ ನೌಕರರಾಗಿದ್ದು, ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ಕರ್ತವ್ಯದಲ್ಲಿ ನಿಷ್ಠೆ ತೋರಿಸದೆ ಭ್ರಷ್ಟಾಚಾರವೆಸಗಿ ಕ.ನಾ.ಸೇ. (ನಡತೆ) ನಿಯಮಗಳು 1966 ನಿಯಮ 3 (1)(i) ರಿಂದ (iii) (ಪ್ರಸ್ತುತ ಕ.ನಾ.ಸೇ. (ನಡತೆ) ನಿಯಮಗಳು 2021 ನಿಯಮ (i) ರಿಂದ (iv)) ರನ್ವಯ ದುರ್ನಡತೆಯನ್ನು ಎಸಗಿರುವುದು ಮೇಲ್ನೋಟಕ್ಕೆ ಕಂಡುಬಂದಿರುತ್ತದೆ. ಎದುರುದಾರರ ವಿರುದ್ಧ ಇಲಾಖಾ ವಿಚಾರಣಾ ಮಾಡಲು ಕರ್ನಾಟಕ ನಾಗರಿಕ ಸೇವಾ-(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ)ರಡಿ ವಿಚಾರಣೆ ನಡೆಸಲು ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 12(3) ರಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

ಸಂ. ಕಂಪ್ಲೇಂಟ್/ಉಪಲೋಕ್/ಬಿಡಿ/2869/2021
ಪಿ.ಓ. ಎ.ಆರ್.ಇ–06

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ, ಈ ವರದಿಯನ್ನು ಸ್ವೀಕರಿಸಿದ **ಮೂರು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

26/4/22

(ನ್ಯಾಯಮೂರ್ತಿ ಬಿ.ಎಸ್. ಪಾಟೀಲ್)
ಉಪಲೋಕಾಯುಕ್ತರು–1,
ಕರ್ನಾಟಕ ರಾಜ್ಯ, ಬೆಂಗಳೂರು.